**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ನಂಜನಗೂಡು**

**ಸಿ.ಸಿಃ 5905/2021**

| | | |
|---|---|---|
| ಸಾಕ್ಷಿದಾರರ ಹೆಸರು | **ಆರತಿ ಟಿ** | **ಪ್ರಾಸಾಃ 01** |
| ತಂದೆಯ/ಗಂಡನ ಹೆಸರು | ಪಾದಲಿಂಗಪ್ಪ | **ಚಾಸಾಃ 01** |
| ವಯಸ್ಸು | 32 ವರ್ಷ | ದಿಃ 23.09.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |
| ಕೆಲಸ | ಪಿ.ಎಸ್.ಐ, ಗಂಡಸಿ ಪೊಲೀಸ್ ಠಾಣೆ | |
| ವಾಸ | ಗಂಡಸಿ, ಹಾಸನ | |

**ಮುಖ್ಯ ವಿಚಾರಣೆ ಪ್ರಾಜ್ಞ ಸ.ಸ.ಅ ರವರಿಂದಃ**

ನಾನು ಜೂನ್ 2021 ರಿಂದ ಜನವರಿ 2023 ರವರೆಗೆ ಬಿಳಿಗೆರೆ ಪೋಲಿಸ್ ಠಾಣೆಯಲ್ಲಿ ಎ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 09.09.2021 ರಂದು ಗಣಪತಿ ಹಬ್ಬದ ಪ್ರಯುಕ್ತ ರಾತ್ರಿ 22.00 ಗಂಟೆಗೆ ನಾನು ಸಿಬ್ಬಂದಿಗಳಾದ ಚಾಸಾ 4 ಮತ್ತು 5 ರವರೊಂದಿಗೆ ಇಲಾಖಾ ಜೀಪ್ ನಲ್ಲಿ ಠಾಣಾ ಗಸ್ತಿನಲ್ಲಿರುವಾಗ ಬಾತ್ಮಿದಾರರಿಂದ ನಗರ್ಲೆ ಬಳಿ ಅಕ್ರಮವಾಗಿ ಮದ್ಯ ಮಾರಾಟ ಮಾಡುವ ಉದ್ದೇಶದಿಂದ ಯಾವುದೋ ಒಬ್ಬ ವ್ಯಕ್ತಿ ಮಧ್ಯವನ್ನು ತೆಗೆದುಕೊಂಡು ಹೋಗುತ್ತಿದ್ದಾರೆ ಎಂದು ಮಾಹಿತಿ ಬಂದಿದ್ದು, ಬಿಳಿಗೆರೆ ಗ್ರಾಮದ ಅಂಬೇಡ್ಕರ್ ಭವನದ ಬಳಿ ಈ ವಿಚಾರದ ಬಗ್ಗೆ ತಿಳಿಸಿ ಚಾಸಾ 2 ಮತ್ತು 3 ರವರನ್ನು ಮಹಜರ್ ಗೆ ಸಹಕರಿಸುವಂತೆ ಕೇಳಿಕೊಂಡಿದ್ದು ಅದಕ್ಕೆ ಅವರು ಒಪ್ಪಿದ ಮೇರೆಗೆ ಅವರೊಂದಿಗೆ 23.00 ಗಂಟೆಗೆ ಅಲ್ಲಿಂದ ಹೊರಟು ನಗರ್ಲೆ ಬಳಿ 23.15 ಗಂಟೆಗೆ ತಲುಪಿ ಅಲ್ಲಿ ಒಬ್ಬ ವ್ಯಕ್ತಿ ಪ್ಲಾಸ್ಟಿಕ್ ಚೀಲವನ್ನು ತನ್ನ ಹೆಗಲ ಮೇಲೆ ಇಟ್ಟುಕೊಂಡು ನಗರ್ಲೆ ಗ್ರಾಮದ ಕಡೆ ಹೋಗುತ್ತಿರುವುದು ಕಂಡು ಬಂದಿದ್ದು ಪಂಚರ ಸಮಕ್ಷಮ ಆತನ ಕೈಯಲ್ಲಿದ್ದ ಪ್ಲಾಸ್ಟಿಕ್ ಚೀಲವನ್ನು ಪರಿಶೀಲಿಸಲಾಗಿ ಒಟ್ಟು 90 ಎಂ.ಎಲ್. ನ 35 ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿ ಟೆಟ್ರಾ ಪ್ಯಾಕೆಟುಗಳು ಇರುವುದು ಕಂಡು ಬಂದಿರುತ್ತದೆ. ಅದರ ಬೆಲೆಯನ್ನು ನೋಡಲಾಗಿ ಅದು ತಲಾ 35 ರೂ 15 ಪೈಸೆ ಇದ್ದು ಒಟ್ಟು ಬೆಲೆ 3371 ರೂ 52 ಪೈಸೆ ಮೌಲ್ಯದ್ದಾಗಿದ್ದು, ಅಕ್ರಮ ಮಾರಾಟದ ಬಗ್ಗೆ ಪರವಾಣಿಗೆ ಇದೆ ಎಂದು ವಿಚಾರಿಸಲಾಗಿ, ಯಾವುದೇ ಪರವಾಣಿಗೆ ಇಲ್ಲ ಎಂದು ತಿಳಿಸಿರುತ್ತಾರೆ. ನಂತರ ಅವರ ಹೆಸರು ಕೇಳಲಾಗಿ ಮಹೇಶ ಬಿನ್ ಲೋಲಯ್ಯ, 44 ವರ್ಷ, ನಗರ್ಲೆ ಗ್ರಾಮ ಎಂದು ತಿಳಿಸಿರುತ್ತಾರೆ. ನಂತರ ದಿಃ 10.09.2022 ಸಮಯ 23.30 ರಿಂದ ಬೆಳಗಿನ ಜಾವ 1 ಗಂಟೆಯ ವರೆಗೆ ಪಂಚರ ಸಮಕ್ಷಮ ಸ್ಥಳ ಮಹಜರ್ ಕ್ರಮ

ಜರುಗಿಸಿರುತ್ತೇನೆ. ಆರೋಪಿ ಬಳಿ ಇದ್ದ ಮಧ್ಯದ ಟೆಟ್ರಾ ಪ್ಯಾಕೇಟುಗಳು ಹಾಗೂ ಪ್ಲಾಸ್ಟಿಕ್ ಚೀಲವನ್ನು ಅಮಾನತ್ ಪಡಿಸಿಕೊಂಡಿರುತ್ತೇನೆ. ಮಹಜರ್ ಸಮಯದಲ್ಲಿ ರಾಸಾಯನಿಕ ವಿಶ್ಲೇಷಣೆಗೆ ಕಳುಹಿಸಲು ಸದರಿ 8 ಮದ್ಯದ ಪೌಚುಗಳನ್ನು ಪ್ರತ್ಯೇಕವಾಗಿ ಬಿಳಿ ಬಟ್ಟೆಯಿಂದ ಸುತ್ತಿ ಆರ್ ಎಂಬ ಅಕ್ಷರದಿಂದ ಅರಗಿನ ಸೀಲು ಮಾಡಿ ಸದರಿ ಮದ್ಯದ ಪ್ಯಾಕೇಟುಗಳ ಮೇಲೆ ಪಂಚರ ಹಾಗೂ ನನ್ನ ಸಹಿವುಳ್ಳ ಚೀಟಿಯನ್ನು ಅಂಟಿಸಿರುತ್ತೇನೆ. ಆರೋಪಿ ಮತ್ತು ಮಾಲು ಸಮೇತ 1.45 ಗಂಟೆಗೆ ಠಾಣೆಗೆ ಹಾಜರಾಗಿ ಚಾಸಾ 8 ರವರಿಗೆ ಸ್ವ ವರದಿ ನೀಡಿರುತ್ತೇನೆ. ಚಾಸಾ 2 ರಿಂದ 5 ರವರ ಹೇಳಿಕೆಗಳನ್ನು ದಾಖಲಿಸಿರುತ್ತೇನೆ. ಅದೇ ದಿನ ಆರೋಪಿಯ ವಿರುದ್ಧ ದಸ್ತಗಿರಿ ಕ್ರಮ ಜರುಗಿಸಿ ಹೆಚ್.ಸಿ 76 ಹಾಗೂ ಪಿ.ಸಿ 342 ರವರ ಬೆಂಗವಲಿನಲ್ಲಿ ಘನ ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ. ಅದೇ ದಿನ ಚಾಸಾ 8 ರವರಿಗೆ ಈ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಹಸ್ತಾಂತರಿಸಿರುತ್ತೇನೆ.

ನಂತರ ದಿಃ 31.10.2021 ರಂದು ಈ ಪ್ರಕರಣದ ಕಡತವನ್ನು ಚಾಸಾ 8 ರವರಿಂದ ಸ್ವೀಕರಿಸಿ ಎಫ್.ಎಸ್.ಎಲ್ ವರದಿ ಪಡೆದು ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿ ಸ್ವ ವರದಿಯಲ್ಲಿ ತನ್ನ ರುಜು ನೋಡಿ ಗುರುತಿಸಿದ್ದು, ಅದನ್ನು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಸಾಕ್ಷಿ ಸ್ಥಳ ಮಹಜರ್ ನಲ್ಲಿ ತನ್ನ ರುಜು ನೋಡಿ ಗುರುತಿಸಿದ್ದು, ಅದನ್ನು ನಿಪಿ-2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ರುಜುವನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ಸಾಕ್ಷಿ ಎಫ್.ಎಸ್.ಎಲ್. ವರದಿಯಲ್ಲಿನ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿ.ಪಿ. 3 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿ.ಪಿ. 3(ಎ) ಎಂದು ಗುರುತಿಸಲಾಯಿತು.

ಸಾಕ್ಷಿ ಈ ದಿನ ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ 90 ಎಂ.ಎಲ್. ನ 8 ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿ ಟೆಟ್ರಾ ಪ್ಯಾಕೆಟುಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾಗಿ ಮುದ್ದೆಮಾಲು 1 ಎಂದು ಗುರುತಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಗೆ ಮಾನ್ಯ ಎ.ಪಿ.ಪಿ. ರವರು ಸಮಯಾವಕಾಶ ಕೋರಿದ್ದು, ಸಮಯ ನೀಡಿ ಮೂಂದೂಡಲಾಯಿತು.**

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ.ಹೇ.ಕೇ.ಸ.ಇದೆ.ಎಂ.ಒ**

1 **ನೇ ಹೆಚ್ಚುವರಿ ಸಿ.ಜೆ ಮತ್ತು ಜೆ.ಎಂ.ಎಫ್.ಸಿ**

**ನ್ಯಾಯಾಲಯ, ನಂಜನಗೂಡು**